ಶ್ರೀ ಜೆ.ಹೆಚ್.ಪಟೇಲ್ : ಪಿ.ಎ.ಸಿ.ಗೆ ರೆಫರ್ ಮಾಡೋಣ, ನಮ್ಮ ಅಭ್ಯಂತರವೇನೂ ಇಲ್ಲ. But the accounts have got to be audited. ಪಿ.ಎ.ಸಿ. ಯವರು ಆಡಿಟ್ ಮಾಡಿಸುತ್ತಾರೆಯೇ ? ಆಡಿಟ್ ರಿಪೋರ್ಟ್ ಮೇಲೆ ಪಿ.ಎ.ಸಿ. ಅಧಿಕಾರಿಗಳನ್ನು ಎಕ್ಸಾಮಿನ ಮಾಡುವುದು

An hon. Member : They can enquire into it.

ಅಧ್ಯಕ್ಷರು : ಎ.ಜಿ.ಯವರ ಆಡಿಟ್ ಮುಗಿದ ನಂತರ ರೆಸ್ಪೆಕ್ಟಿವ್ ಇಯರ್ಸ್‌ನ ಆಡಿಟ್ ಪ್ಯಾರಾಗಳನ್ನು ಪಿ.ಎ.ಸಿ.ಯವರು ಡೆಲಿಬರೇಟ್ ಮಾಡುತ್ತಾರೆ. ಆದರೆ, ಇಲ್ಲಿ ಆಡಿಟ್ ಆಗಿಲ್ಲ.

SRI M. MALLIKARJUNA KHARGE : Any matter referred from the House, PAC can take it up. That is the provision.

ಶ್ರೀ ಜೆ.ಹೆಚ್. ಪಟೇಲ್ : ಇದು ತಮಗೆ ಬಿಟ್ಟಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಇದನ್ನು ರೆಕಮೆಂಡ್ ಮಾಡಿದರೆ....

MR. SPEAKER : Government has expressed its willingness to subject itself to enquiry.

ಗಮನ ಸೆಳೆಯುವ ಸೂಚನೆಗಳು

ಮಡಿಕೇರಿ ವಕೀಲರ ಸಂಘದಲ್ಲಿ ನಡೆದಿರುವ ಛಾಪಾ ಕಾಗದ ಮಾರಾಟದ ಹಗರಣ

ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ಮಡಿಕೇರಿ ವಕೀಲರ ಸಂಘದಲ್ಲಿ ನಡೆದಿರುವ ಛಾಪಾ ಕಾಗದ ಮಾರಾಟದ ಹಗರಣದ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಆರ್. ರೋಷನ್‌ಬೇಗ್ (ಗೃಹ ಇಲಾಖಾ ರಾಜ್ಯ ಸಚಿವರು) :ಮಾನ್ಯ ಅಧ್ಯಕ್ಷರೆ, 1997ರ ಏಪ್ರಿಲ್ ಮಾಹೆಯಲ್ಲಿ ಕೊಡಗು ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ಕೊಡಗು ನ್ಯಾಯವಾದಿಗಳ ಸಹಕಾರ ಸಂಘ, ಜಿಲ್ಲಾ ಕೋರ್ಟ್ ಸಂಕೀರ್ಣ, ಮಡಿಕೇರಿ ಇಲ್ಲಿ ನಕಲಿ ಛಾಪಾ ಕಾಗದಗಳು ಮಾರಾಟವಾಗುತ್ತಿದೆ ಎಂದು ಬಂದ ಸುದ್ದಿಯ ಮೇಲೆ, ಸದರಿ ಸಹಕಾರ ಸಂಘದಿಂದ ಮಾರಾಟವಾಗುತ್ತಿದ್ದ ಛಾಪಾ ಕಾಗದಗಳನ್ನು ತರಿಸಿ ಪರಿಶೀಲಿಸಲಾಗಿ ನಕಲಿ ಛಾಪಾ ಕಾಗದವೆಂದು ಕಂಡು ಬಂದಿರುತ್ತದೆ.

ದಿನಾಂಕ : 24.4.1997 ರಂದು ಸಂಜೆ 4.45ಕ್ಕೆ ನ್ಯಾಯವಾದಿಗಳ ಸಹಕಾರ ಸಂಘದ ಕಛೇರಿ, ನ್ಯಾಯವಾದಿಗಳ ಕಛೇರಿ ಹಾಗೂ ಸಹಕಾರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿ ಅವರ ಮನೆಯ ಮೇಲೆ ಏಕೆ ಕಾಲದಲ್ಲಿ ಪೋಲೀಸರು ದಾಳಿ ಮಾಡಿ, ಖಜಾನೆಯ ನಕಲಿ ಮೊಹರುಗಳನ್ನು ಮತ್ತು ರೂ. 1.2 ಲಕ್ಷ ಬೆಲೆ ಬಾಳುವ ನಕಲಿ ಛಾಪಾ ಕಾಗದಗಳನ್ನು ವಶಪಡಿಸಿಕೊಂಡಿರುತ್ತಾರೆ.

ಈ ಸಂದರ್ಭದಲ್ಲಿ ಸಹಕಾರ ಸಂಘದ ಕಾರ್ಯದರ್ಶಿಯಾದ ಶ್ರೀ ಮಾಚಯ್ಯ, ಅಧ್ಯಕ್ಷರಾದ ಶ್ರೀ ಎಂ.ಜಿ. ಪ್ರಕಾಶ್ ಹಾಗೂ ಮಾರಾಟ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಪ್ರಮೀಳ ಮತ್ತು ಶ್ರೀಮತಿ ಹಂಸ ಅವರನ್ನು ಬಂಧಿಸಿ ಪ್ರಶ್ನಿಸಲಾಗಿ ಕೆಳಕಂಡ ವಿಷಯಗಳು ಬೆಳಕಿಗೆ ಬಂದಿರುತ್ತದೆ.

ಸದರಿ ಸಹಕಾರ ಸಂಘವು ಮಾರ್ಚ್ 1995ರಲ್ಲಿ ನಕಲಿ ಛಾಪಾ ಕಾಗದ ಮಾರಾಟ ಪ್ರಾರಂಭಿಸಿದ್ದು, ಇದುವರೆವಿಗೂ ಒಂದು ಕೋಟಿಗೂ ಹೆಚ್ಚು ಬೆಲೆ ಬಾಳುವ ಛಾಪಾ ಕಾಗದ ಮಾರಾಟ ಮಾಡಿರುತ್ತದೆ. ಈ ಛಾಪಾ ಕಾಗದವನ್ನು ಹಾಗೂ ಖಜಾನೆ ನಕಲಿ ಮೊಹರನ್ನು ಕೇರಳದ ಶ್ರೀ ಬಾಲಕೃಷ್ಣ ಎಂಬುವವನು ಸರಬರಾಜು ಮಾಡುತ್ತಿದ್ದು, ಈಗ ತಲೆ ಮರೆಸಿಕೊಂಡಿರುತ್ತಾನೆ.

ಈ ಪ್ರಕರಣದ ಮುಖ್ಯ ಆರೋಪಿ ಶ್ರೀ ಬಾಲಕೃಷ್ಣ ಅವರ ಕಂಪ್ಯೂಟರ್ ಭಾವ ಚಿತ್ರವನ್ನು ತಯಾರಿಸಿದ್ದು, ಅದನ್ನು ಎಲ್ಲಾ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಮತ್ತು ಈ ಆರೋಪಿಯನ್ನು ಪತ್ತೆ ಹಚ್ಚಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಬಂಧದಲ್ಲಿ ಮಡಿಕೇರಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:64:67 ಕಲಂ 258, 259, 260, 420, 468, 472 ಐಪಿಸಿ ಮೇರೆಗೆ ಪ್ರಕರಣ ದಾಖಲುಗೊಂಡಿದ್ದು ವಿಚಾರಣೆಯಲ್ಲಿರುತ್ತದೆ.

ಈ ಪ್ರಕರಣವು ಬಹಳ ಸಂಕೀರ್ಣವಾಗಿದ್ದು, ಬಹಳ ವಿಶಾಲವಾದ ಜಾಲ ಹೊಂದಿರುವುದು ಕಂಡು ಬಂದಿರುವುದರಿಂದ ಈ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ವಹಿಸಲಾಗಿದೆ.

ಶ್ರೀ ಡಿ.ಎಸ್. ಮಾದಪ್ಪ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಹಗರಣವು ಬೆಳಕಿಗೆ ಬಂದು ನಾಲ್ಕು ತಿಂಗಳುಗಳಾದರೂ ಸಹ ಮೂರನೆಯ ಆರೋಪಿಯಾದಂಥ ಉಪಾಧ್ಯಕ್ಷನನ್ನು ಇಲ್ಲಿಯವರೆಗೆ ಅರೆಸ್ಟ್ ಮಾಡಲು ಆಗಿಲ್ಲ. ಕೇರಳದ ಬಾಲಕೃಷ್ಣ ಎಂಬುವವರೇನು ಇದನ್ನು ಒದಗಿಸಿದ್ದಾರೆ, ಅವರನ್ನು ಸಹ ಇದುವರೆಗೆ ಹಿಡಿಯಲು ಆಗಿಲ್ಲ. ಕೊಡಗು ಜಿಲ್ಲೆಯಲ್ಲಿ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೆಲೆಯ ಈ ನಕಲಿ ಛಾಪಾ ಕಾಗದಗಳು ಚಲಾವಣೆಯಾಗಿದೆ. ಈ ಪ್ರಕರಣದ ಮೊದಲನೆಯ ಆರೋಪಿಯಾದ ಮಾಚಯ್ಯನವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅವರು ಮಡಿಕೇರಿ ನಗರದಲ್ಲಿಯೇ ಇರಬೇಕಾಗಿತ್ತು, ಆದರೆ ಅವರು ಇಪ್ಪತ್ತು ಕಿಲೋಮೀಟರ್ ದೂರದ ಪಾರಣೆಯಲ್ಲಿನ ಅವರ ಮನೆಗೆ ಹೋಗುತ್ತಿದ್ದಾರೆ. ಜುಲೈ15ನೇ ತಾರೀಖು ಅವರ ಮನೆಯ ಅಡುಗೆ ಮಾಡುವ ಕೆಲಸದ ಸುಮಾರು 15 ವರ್ಷ ವಯಸ್ಸಿನ ಹುಡುಗಿಯ ಸಾವು ಸಂಶಯಾಸ್ಪದವಾಗಿ ಆಗಿದೆ. ಆ ಹುಡುಗಿಯ ಹೆಣವನ್ನು ಹೂತಿದ್ದದನ್ನು ತೆಗೆದು ಪರೀಕ್ಷೆ ಮಾಡಿದಂಥ ಸಂದರ್ಭದಲ್ಲಿ ವಿಷವನ್ನು ಸೇವನೆ ಮಾಡಿ ಮೃತಪಟ್ಟಿರುವುದಾಗಿ ತಿಳಿದು ಬಂದಿರುತ್ತದೆ. ನಾನು ಈ ವಿಚಾರವನ್ನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ಈ ಪ್ರಕರಣವನ್ನು ಆಗಲೇ ಸಿ.ಓ.ಡಿ.ಗೆ ವಹಿಸಿದ್ದರೆ, ಈ ಕೊಲೆ ಆಗುತ್ತಿರಲಿಲ್ಲ. ಈ ಹಗರಣದಲ್ಲಿ ಅಂತರ್ ರಾಜ್ಯದ ಕೈವಾಡವಿದೆ. ಕೇರಳ ರಾಜ್ಯದಿಂದ ಈ ಛಾಪಾ ಕಾಗದ ಬರುತ್ತಿದೆ. ಮಡಿಕೇರಿ ವಕೀಲರ ಸಂಘದಲ್ಲಿ ಐದು ಸಾವಿರ ರೂಪಾಯಿಯ ನಾನ್‌ಜ್ಯುಡಿಷಿಯರಿ ಮತ್ತು ಒಂದು ಸಾವಿರ ರೂಪಾಯಿಯ ಕೋರ್ಟ್ ಸ್ಟ್ಯಾಂಪ್‌ನ್ನು ಮಾರಾಟ ಮಾಡಲಾಗಿತ್ತು. ಈ ವ್ಯವಹಾರ 1993ರಿಂದ ಪ್ರಾರಂಭವಾಗಿತ್ತು. ಆದರೆ ಉತ್ತರದಲ್ಲಿ 1995 ಎಂದು ಹೇಳಿದ್ದಾರೆ. ಅನಂತರ, ತಮಿಳುನಾಡಿನಲ್ಲಿ ಎರಡು ಸಾವಿರ ಮತ್ತು ಮೂರು ಸಾವಿರ ರೂಪಾಯಿಗಳ ನಾನ್‌ಜ್ಯುಡೀಷಿಯರಿ ಕೋರ್ಟ್ ಸ್ಟ್ಯಾಂಪ್ ಮಾರಾಟವಾಗಿರುವುದು ಬೆಳಕಿಗೆ ಬಂದಿದೆ. ಇದು ರಾಷ್ಟ್ರವ್ಯಾಪ್ತಿಯಾಗಿ ನಡೆಯುತ್ತಿರುವುದರಿಂದ, ಈ ಪ್ರಕರಣವನ್ನು ಸಿ.ಓ.ಡಿ.ಯಿಂದ ಪತ್ತೆ ಮಾಡಲು

ಸಾಧ್ಯವಿಲ್ಲ, ಆದ್ದರಿಂದ ಇದನ್ನು ಸಿ.ಬಿ.ಐ. ತನಿಖೆ ಒಳಪಡಿಸಬೇಕೆಂದು ತಮ್ಮಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇಂದು ಇಡೀ ರಾಷ್ಟ್ರದಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿದ್ದು ಮಡಿಕೇರಿಯಲ್ಲಿ ಮಾತ್ರ ಬೆಳಕಿಗೆ ಬಂದಿರುತ್ತದೆ. ಮೂರನೆಯ ಆರೋಪಿಯಾದಂಥ ಶಿವಕುಮಾರ್‌ರವರ್ಯಾರು ಇದ್ದಾರೆ, ಅವರ ಸೋದರ ಸಿ.ಓ.ಡಿ. ಯಲ್ಲಿ ಅಧಿಕಾರಿಯಾಗಿದ್ದಾರೆ, ಅಲ್ಲೂ ಸಹ ಆರೋಪಿಯ ಆರೋಪಗಳು ಮರೆಮಾಚಬಹುದು ಎನ್ನತಕ್ಕ ಸಂಶಯವಿದೆ. ಆದ್ದರಿಂದ ಈ ಪ್ರಕರಣವನ್ನು ಸಿ.ಬಿ.ಐ.ನಿಂತ ತನಿಖೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ ಬಸವರಾಜ್ (ವೀರಾಜಪೇಟೆ) : ಮಾನ್ಯ ಅಧ್ಯಕ್ಷರೆ, ತಪಾಸಣಾ ಅಧಿಕಾರಿಯನ್ನು ಈಗ ಬದಲಾವಣೆ ಮಾಡಿದ್ದಾರೆ. ಆದ್ದರಿಂದ ಪ್ರಾಮಾಣಿಕವಾಗಿ ಸಿ.ಓ.ಡಿ. ಯಿಂದ ತನಿಖೆಯಾಗುತ್ತದೋ ಇಲ್ಲವೋ ಎನ್ನತಕ್ಕ ಸಂಶಯ ನಮಗೆ ಬರುತ್ತಿದೆ. ಇದುವರೆಗೆ ಆ ಉಪಾಧ್ಯಕ್ಷನನ್ನು ಬಂಧನ ಮಾಡಿಲ್ಲ, ತಪಾಸಣೆ ಮಾಡುತ್ತಿದ್ದಂಥ ಅಧಿಕಾರಿಯನ್ನು ಬದಲಾವಣೆ ಮಾಡಿದ್ದಾರೆ, ಈ ರೀತಿ ಮಾಡುವುದರಿಂದ ಸಿ.ಓ.ಡಿ ತನಿಖೆಯ ಮೇಲೆ ಪ್ರಭಾವ ಬೀರುತ್ತದೆ ಮತ್ತು ಅಂತರ್ ರಾಜ್ಯದ ಮಟ್ಟದಲ್ಲಿ ಈ ಜಾಲವಿರುವುದರಿಂದ ದಯವಿಟ್ಟು ಇದರ ಬಗ್ಗೆ ಸಿ.ಬಿ.ಐ ನಿಂದಲೆ ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಎರಡು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಮೊದಲನೆಯದಾಗಿ ನಕಲಿ ಛಾಪಾ ಕಾಗದಗಳನ್ನು ಮಾರಾಟ ಮಾಡಿದ್ದಾರೆ, ಅದರಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆದಿದೆ. ಈ ನಕಲಿ ಛಾಪಾ ಕಾಗದಗಳನ್ನು ಖರೀದಿ ಮಾಡಿ ಅದರ ಮೂಲಕ ಯಾರೆಲ್ಲಾ ವ್ಯವಹಾರಗಳನ್ನು ಮಾಡಿರುತ್ತಾರೋ ಆ ವ್ಯವಹಾರದ ದಾಖಲೆಗಳ ಪರಿಸ್ಥಿತಿಯೇನಾಗುತ್ತದೆ? ಈ ನಕಲಿ ಛಾಪಾಕಾಗದದ ಮೂಲಕ ಕೆಲವಾರು ಬ್ಯಾಂಕ್‌ಗಳಿಗೆ ಮಾರ್ಟ್‌ಗೇಜ್, ಪ್ಲೆಡ್ಜ್ ಮತ್ತೊಂದು ಮಾಡಿದ್ದರೆ, ಆ ವ್ಯವಹಾರಗಳು ಸಹ ನಲ್ ಅಂಡ ವೈಡ್ ಆಗುವಂಥ ಸಂದರ್ಭ ಬರುತ್ತದೆ. ಇದರ ಪರಿಸ್ಥಿತಿ ಬಗ್ಗೆ ಸಹ ಸರ್ಕಾರ ಗಮನಹರಿಸಬೇಕಾದುದು ಪ್ರಮುಖವಾದ ಅಂಶವಾಗಿದೆ. ಇಲ್ಲಿ ನಿರಪರಾಧಿಗಳು ಬಲಿಯಾಗುತ್ತಾರೆ ಎಂಬುದು ಬಹಳ ಪ್ರಮುಖವಾದುದು. ನಿರಪರಾಧಿಗಳಿಗೆ ಡಬ್ಬಲ್ ಪೇಮೆಂಟ್ ಆಗುವಂಥ ಎಲ್ಲಾ ಸಾಧ್ಯತೆಗಳಿವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಸಾವಿರಾರು ನಿರಪರಾಧಿಗಳು ಗೊತ್ತಿಲ್ಲದೆ ನಕಲಿ ಛಾಪಾಕಾಗದದ ಮೂಲಕ ವ್ಯವಹಾರ ಮಾಡಿರುತ್ತಾರೋ ಅವರಿಗೆ ರಕ್ಷಣೆ ಕೊಡಬೇಕು. ಎಫ್.ಐ.ಆರ್.ನ್ನು ದಾಖಲು ಮಾಡುವಂಥ ಸಂದರ್ಭದಲ್ಲಿ ನಿಯಮ 258, 259, 260, 420 468,472ರ ಅನ್ವಯ ದಾಖಲು ಮಾಡಿದ್ದಾರೆ. ಬಾಕಿ ನಿಯಮಗಳ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ನಿಯಮ 260 ಏನು ಹೇಳುತ್ತದೆಂದರೆ Using as genuine government stamp known to be a counterfeit. ಸರ್ಕಾರದ ಸ್ಟ್ಯಾಂಪ್ ಪೇಪರ್‌ನ್ನು ಖರೀದಿ ಮಾಡಿ ಅದು ಕೌಂಟರ್ ಫಿಟ್ ಎಂದು ಗೊತ್ತಿದ್ದು ಉಪಯೋಗ ಮಾಡಿದವರು ಎಂದು ಅರ್ಥ. ನಾನೂ ಒಬ್ಬ ವಕೀಲ. ವಕೀಲರ ಸಂಘದಲ್ಲಿ ಮತ್ತು ವಕೀಲರುಗಳು ವ್ಯಾಪಕವಾದ ಜಾಲವನ್ನು ಮಾಡಿದ ಕಾರಣ ಜನಸಾಮಾನ್ಯರನ್ನು ಇದಕ್ಕೆ ಬಲಿಕೊಟ್ಟು ಅವರನ್ನು ಇದರಲ್ಲಿ ಇನ್‌ವಾಲ್ವ್ ಮಾಡುವ ಪ್ರಸಂಗಗಳಿದೆ.

ನಿಯಮ 260ನ್ನು ದುರುಪಯೋಗ ಮಾಡಿಕೊಂಡು, ಈ ಚಟುವಟಿಕೆಗೆ ಹಲವಾರು ಜನರು ಪ್ರೋತ್ಸಾಹ ಕೊಡುತ್ತಾರೆ ಎನ್ನತಕ್ಕ ಹಿನ್ನೆಲೆಯನ್ನು ಕ್ರಿಯೇಟ್ ಮಾಡಿ ನಿರಪರಾಧಿಗಳನ್ನು ಇದರಲ್ಲಿ ಸಿಲುಕಿಸತಕ್ಕ ವ್ಯವಸ್ಥೆ ಈಗಾಗಲೆ ನಡೆದಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇದನ್ನು ಸಿ.ಬಿ.ಐ. ತನಿಖೆಗೆ ಹಸ್ತಾಂತರಿಸುವುದರ ಜೊತೆಗೆ ಇದರಿಂದ ಯಾರ್ಯಾರು ವಂಚಿತರಾಗಿದ್ದಾರೆ ಅವರಿಗೆ ರಕ್ಷಣೆ ಕೊಡಬೇಕು, ಜೊತೆಗೆ ನಿರಪರಾಧಿಗಳಾಗಿದ್ದು 260ರ ನಿಯಮದ ಅಡಿಯಲ್ಲಿ ಯಾರನ್ನೆಲ್ಲ ಅಪರಾಧಿಗಳೆಂದು ಪರಿಗಣಿಸಿ ತಳ್ಳಲ್ಪಡುವ ಪ್ರಯತ್ನವಾಗುತ್ತದೋ ಅದಕ್ಕೂ ಸಹ ರಕ್ಷಣೆಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಜೊತೆಗೆ ಬಾಲಕೃಷ್ಣ ಎಂಬ ಕೇರಳದ ಆರೋಪಿಯನ್ನು ಹಿಡಿಯಬೇಕು. ಈ ನಕಲಿ ಛಾಪಾ ಕಾಗದಗಳು ತಮಿಳುನಾಡಿನಲ್ಲೂ ಮಾರಾಟವಾಗಿರುವ ಬಗ್ಗೆ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ದಕ್ಷಿಣ ಭಾರತದ ಎಲ್ಲಾ ಭಾಗಗಳಲ್ಲೂ ಈ ನಕಲಿ ಛಾಪಾ ಕಾಗದಗಳು ಇದೆಯೆಂದು ತಿಳಿದುಬಂದಿದೆ. ಮಾನ್ಯ ನಾಣಯ್ಯನವರಿಗೆ ಇದು ಚೆನ್ನಾಗಿ ಗೊತ್ತಿದೆ. ಸಾಮಾನ್ಯವಾಗಿ ಕೊಡಗಿನಲ್ಲಿ ಕಾಫಿ ತೋಟವನ್ನು ಖರೀದಿ ಮಾಡಲು ಬರುವ ಚೆಟ್ಟಿಯಾರ್‌ಗಳು, ಕೇರಳದಿಂದ ಬರುವಂಥ ನಾಯರ್‌ಗಳು ಇವರೆಲ್ಲರೂ ಬೇರೆ ಬೇರೇ ರಾಜ್ಯಕ್ಕೆ ಸೇರಿರುವುದರಿಂದ, ಇವರೆಲ್ಲರು ಇದರಲ್ಲಿ ಶಾಮೀಲಾಗಿರುವುದರಿಂದ ಬಹಳ ಮುಖ್ಯವಾಗಿ ಈ ತನಿಖೆಯನ್ನು ಸಿ.ಬಿ.ಐ. ಗೆ ಹಸ್ತಾಂತರ ಮಾಡಲೇಬೇಕು. ಮಾನ್ಯ ಸಚಿವರು ನಮ್ಮ ಭಾವನೆಗೆ ಸಹಮತವನ್ನು ವ್ಯಕ್ತಪಡಿಸುತ್ತಾರೆಂದು ನನ್ನ ಭಾವನೆ. ಏಕೆಂದರೆ ಅವರಂಥ ನಿಷ್ಪಾವಂತ ಮಂತ್ರಿಗಳಿರುವ ಈ ನಾಡಿನಲ್ಲಿ ಈ ರೀತಿ ಅಪಚಾರವಾಗತಕ್ಕ ವ್ಯವಸ್ಥೆ ಆಗಬಾರದು ಎನ್ನತಕ್ಕ ವಿಶಾಲವಾದ ಮನಸ್ಸು ಮಾನ್ಯ ನಾಣಯ್ಯನವರಲ್ಲಿದೆಯೆಂದು ನಾನು ಭಾವಿಸುತ್ತೇನೆ. ಸಿ.ಓ.ಡಿ.ಯಿಂದ ತೆಗೆದು ಇದನ್ನು ಸಿ.ಬಿ.ಐ. ತನಿಖೆಗೆ ವಹಿಸಬೇಕು. ಜನರಲ್ಲಿರುವ ಅಪನಂಬಿಕೆಯನ್ನು ದೂರ ಮಾಡಬೇಕು. ಮಾಚಯ್ಯನವರು ಮತ್ತು ಇನ್ನೊಬ್ಬರೇನು ಬಿಡುಗಡೆಯಾಗಿದ್ದಾರೆ ಅವರು ಭಾರಿ ಗತ್ತಿನಿಂದ ಪೇಟೆಯಲ್ಲಿ ಓಡಾಟ ಮಾಡುತ್ತಿದ್ದಾರೆ. ನಾವು ನಿರಪರಾಧಿಗಳು, ನಮ್ಮಿಂದೇನು ತಪ್ಪಾಗಿಲ್ಲ ಎನ್ನುವ ಭಂಗಿಯ ಅವರ ಓಡಾಟಗಳು ಜನರಿಗೆ ಸಂಶಯವನ್ನು ಉಂಟುಮಾಡಿದೆ. ಆದ್ದರಿಂದ ಈ ಪ್ರಕರಣವನ್ನು ಸಿ.ಓ.ಡಿ. ಯಿಂದ ಸಿ.ಬಿ.ಐ.ಗೆ ಹಸ್ತಾಂತರ ಮಾಡುವ ಮೂಲಕ ಈ ರಾಷ್ಟ್ರವ್ಯಾಪ್ತಿ ಜಾಲವನ್ನು ಕೊನೆಗೊಳಿಸಬೇಕು ಮತ್ತು ನಿರಪರಾಧಿ ಜನರಿಗೆ ರಕ್ಷಣೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಕಲಿ ಛಾಪಾ ಕಾಗದದ ಹಗರಣದ ಬಗ್ಗೆ ಸಂಪೂರ್ಣವಾದ ಮಾಹಿತಿ ನಮ್ಮ ಹತ್ತಿರ ಇದೆ. ನಾಲ್ಕು ದಿವಸಗಳ ಹಿಂದೆ ಗೃಹ ಮಂತ್ರಿಗಳ ಜೊತೆಯಲ್ಲಿ, ಡಿ.ಜಿ.ಪಿ. ಯವರ ಜೊತೆಯಲ್ಲಿ, ಕೊಡಗು ಜಿಲ್ಲೆಯ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದಮೇಲೆ ಈ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಇಲ್ಲಿ ನಡೆದಿರುವ ವಿಚಾರ ಎರಡು ಭಾಗದಿಂದ ಕೂಡಿದೆ. ಮೊದಲನೆಯದಾಗಿ, ನಾನ್‌ಜ್ಯುಡೀಷಿಯಲ್ ಸ್ಟ್ಯಾಂಪ್ ಪೇಪರ್‌ಗೆ ಸಂಬಂಧಪಟ್ಟಂತೆ ಐದು ಸಾವಿರ ರೂಪಾಯಿಗಳ ಸ್ಟ್ಯಾಂಪ್‌ಗಳು ನಕಲಿ, ಜ್ಯುಡೀಷಿಯಲ್ ಸ್ಟ್ಯಾಂಪ್ ಪೇಪರ್‌ಗೆ ಸಂಬಂಧಪಟ್ಟಂತೆ ಒಂದು ಸಾವಿರ ರೂಪಾಯಿಗಳ ಸ್ಟ್ಯಾಂಪ್ ಪೇಪರ್‌ಗಳು ನಕಲಿ. ಇದು ಸುಮಾರು

ಎರಡು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಆದರೆ ಇದು ಮೊದಲಬಾರಿಗೆ ಬೆಳಕಿಗೆ ಬಂದದ್ದು, ಕೆಲವು ವಕೀಲರಿಗೆ ಇದರ ಬಗ್ಗೆ ಸಂಶಯವಿದ್ದು ಅವರು ನಕಲಿ ಮತ್ತು ಅಸಲಿ ಎರಡನ್ನು ನೋಡಿದಮೇಲೆ ಅವರಿಗೆ ಇದರಲ್ಲಿ ಎಲ್ಲೋ ಒಂದು ಕಡೆ ನಕಲಿ ನಡೆಯುತ್ತಿದೆ ಎಂದು ಅನ್ನಿಸಿದೆ. ಆ ರೀತಿ ನಕಲಿ ಛಾಪಾ ಕಾಗದದ ವ್ಯವಹಾರ ನಡೆಯುತ್ತಿದ್ದದ್ದು ಎಲ್ಲಿ ಎಂದರೆ ಲೀಗಲ್ ಪ್ರಾಕ್ಟ್ರೀಷಿಯನರ್ಸ್ ಕೋ-ಅಪರೇಟೀವ್ ಸೊಸೈಟಿಯಲ್ಲಿ? ಲೀಗಲ್ ಪ್ರಾಕ್ಟ್ರೀಷಿಯನರ್ಸ್‌ದ್ದೇ ಒಂದು ಕೋ-ಅಪರೇಟಿವ್ ಸೊಸೈಟಿ ಇದೆ. ಆ ಸಂಸ್ಥೆಯಲ್ಲಿ ಛಾಪಾ ಕಾಗದಗಳನ್ನು ಮಾರಾಟ ಮಾಡಲು ವ್ಯವಸ್ಥೆ ಇದೆ. ಅಲ್ಲಿ ಸದಸ್ಯರಾಗಿರುವವರೆಲ್ಲರೂ ವಕೀಲರ ಸಂಘದ ಸದಸ್ಯರುಗಳೆ. ಅದರಲ್ಲಿ ನಾನೂ ಒಬ್ಬ ಸದಸ್ಯ. ಅಲ್ಲಿ ಕಾರ್ಯದರ್ಶಿಗಳು, ಉಪಾಧ್ಯಕ್ಷರು ಮತ್ತು ಅಧ್ಯಕ್ಷರು ಸುಮಾರು ಎಂಟು ಜನ ಸದಸ್ಯರುಗಳಿದ್ದಾರೆ. ಅಲ್ಲಿ ಈ ಜಾಲ ನಡೆಯುತ್ತಿದೆಯೆಂದು ಗೊತ್ತಾದ ಕೂಡಲೆ ಅಲ್ಲಿನ ಎಸ್.ಪಿ. ಯವರು ಕಾರ್ಯದರ್ಶಿಯವರ ಮನೆಯನ್ನು ಮತ್ತು ಕಛೇರಿಯನ್ನು ಒಂದೇ ಬಾರಿಗೆ ಜಪ್ತಿ ಮಾಡಿದ್ದಾರೆ. ಜಪ್ತಿ ಮಾಡುವ ಮೊದಲು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಿಂದ ನಕಲಿ ಪತ್ರಗಳನ್ನೇನು ತೆಗೆದುಕೊಂಡು ರಿಜಿಸ್ಟ್ರೇಷನ್ ಮಾಡಿದ್ದಾರೆ, ಅಂಥ ಎರಡು ಪತ್ರಗಳ ಬಗ್ಗೆ ಅವರಿಗೆ ಶಂಕೆ ಮಾಡಿದ್ದರಿಂದ ಮೊದಲು ಆ ಎರಡು ಪತ್ರಗಳನ್ನು ತೆಗೆದುಕೊಂಡು ಟ್ರೆಜರಿ ಕಛೇರಿಯಿಂದ ಎರಡು ಅಸಲಿ ಪತ್ರಗಳನ್ನು ತೆಗೆದುಕೊಂಡು ಅದನ್ನು ಕಂಪೇರ್‌ಮಾಡಿದಮೇಲೆ ಕಾರ್ಯದರ್ಶಿಯವರ ಮನೆ ಮತ್ತು ಕಛೇರಿಯನ್ನು ಜಪ್ತಿ ಮಾಡುವ ಕೆಲಸ ಮಾಡಿದರು. ಮಾನ್ಯ ಅಧ್ಯಕ್ಷರೆ, ಈ ಒಂದು ಕಾರ್ಯಾಚರಣೆಯನ್ನು ಜಿಲ್ಲೆಯಲ್ಲಿರತಕ್ಕ ಪೋಲೀಸ್‌ನವರು ಮತ್ತು ಪೋಲಿಸ್ ವರಿಷ್ಠ ಅಧಿಕಾರಿಗಳು ಮಾಡಿದ್ದಾರೆ. ಅದಾದ ಮೇಲೆ ಅಧ್ಯಕ್ಷರನ್ನು ಬಂಧನದಲ್ಲಿಟ್ಟರು. ಅಲ್ಲಿರತಕ್ಕ ಎಲ್ಲಾ ಸದಸ್ಯರುಗಳನ್ನು ವಿಚಾರಣೆ ಮಾಡಿದರು. ವಿಚಾರಣೆ ನಂತರ ಕಾರ್ಯದರ್ಶಿಗಳು ಬಂಧನಕ್ಕೊಳಗಾದರು. ಅವರನ್ನು ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇಟ್ಟರು. ಕಡೆಗೆ ಶರತ್ತಿಗೆ ಒಳಪಟ್ಟು ಅವರನ್ನು ಬಿಡುಗಡೆ ಮಾಡಿದರು. ಇನ್ನು ಉಪಾಧ್ಯಕ್ಷರ ಬಗ್ಗೆ ಮಾದಪ್ಪನವರು ಕೇಳಿದರು. ಅವರು ನಮ್ಮ ಮಡಿಕೇರಿಯ ಒಬ್ಬ ಹಿರಿಯ ವಕೀಲರು. ಇದು ಮಾದಪ್ಪನವರಿಗೂ ಚೆನ್ನಾಗಿ ಗೊತ್ತಿದೆ. ಅವರ ಆಪ್ತ ಮಿತ್ರರೂ ಹಾಗೂ ನನ್ನ ಮಿತ್ರರು ಹೌದು. ಅವರು ಈಗ ತಲೆ ಮರೆಸಿಕೊಂಡಿದ್ದಾರೆ. ಅವರು ಮಡಿಕೇರಿ ಬಿಟ್ಟು ಬೇರೆ ಕಡೆ ಹೋಗಿದ್ದಾರೆ. ಕೊನೆಗೆ ಅವರು ಹೈಕೋರ್ಟಗೆ ಒಂದು ಆಂಟಿಸಿಪೇಟರಿ ಬೇಲ್‌ಗಾಗಿ ಅರ್ಜಿ ಹಾಕಿದರು, ಕೋರ್ಟ್‌ನಲ್ಲಿ ಇಂಟೀರಿಮ್ ಬೇಲ್ ಕೊಟ್ಟರು, ಕಡೆಗೆ ಅದನ್ನು ರಿಜೆಕ್ಟ್ ಮಾಡಿದರು. ಮತ್ತೆ ಅವರು ಕೆಳಗಿನ ಕೋರ್ಟಿಗೆ ಹೋದರು. ಅಲ್ಲೂ ಸಹ ಅದನ್ನು ರಿಜೆಕ್ಟ್ ಮಾಡಿದರು. ಈಗ ಅದು ಹೈಕೋರ್ಟಿಗೆ ಬಂದಿದೆ. ಅಲ್ಲಿ ವಿಚಾರಣೆ ನಡೆಯುತ್ತಿದೆ. ಒಂದು ಇಂಟೀರಿಯಮ್ ಆದೇಶ ಕೊಟ್ಟಿದ್ದಾರೆ. ಅವರಂತೂ ನಾಲ್ಕು ತಿಂಗಳಿಂದ ಮಡಿಕೇರಿಯಲ್ಲಿ ಇಲ್ಲದಿರುವುದು ನಿಜ. ನಾಲ್ಕು ತಿಂಗಳಿನಿಂದ ತಲೆಮರೆಸಿಕೊಂಡು ಎಲ್ಲಿಂದಲೋ ಹೈಕೋರ್ಟಿಗೆ ಒಂದು ಅರ್ಜಿಯನ್ನು ಹಾಕಿದ್ದಾರೆ. ನನಗೆ ಕಾಯಿಲೆ ಇದೆ, ನಾನು ಹಾರ್ಟ್ ಪೇಷೆಂಟ್ ಪೋಲಿಸರಿಂದ ನನಗೆ ಮಾನಸಿಕವಾಗಿ ಹಿಂದೆ ಆಗುತ್ತಿದೆ ಎಂದು ಎಲ್ಲಿಂದಲೋ ಲಾಯರ್ ಮುಖಾಂತರ ಕೆಲಸ ನಡೆಸುತ್ತಿದ್ದಾರೆ. ಮೊನ್ನೆ ಕೋರ್ಟಿನಲ್ಲಿ ಒಂದು ವಿಚಾರಣೆ ನಡೆಯಿತು. ಬಹುಶಃ ಅದು ತೀರ್ಪಿಗೆ ಬಾಕಿ ಇದೆ. ಕೊಡಗಿನಲ್ಲಿ ಸುಮಾರು ರಿಜಿಸ್ಟರ್ ಆಗಿರತಕ್ಕ 530 ಪತ್ರಗಳನ್ನು ಸಂಬಂಧಿಸಿದಹಾಗೆ ತಪಾಸಣೆ ಮಾಡಿದ್ದಕ್ಕೆ ಐದೂವರೆ ಲಕ್ಷ ರೂಪಾಯಿ ಇದರಲ್ಲಿ ಸೇರಿದೆ. ಇನ್ನು 500

ಪತ್ರಗಳನ್ನು ಸಂಪೂರ್ಣವಾಗಿ ತಪಾಸಣೆ ಮಾಡಿದರೆ, ಇದರ ಮೊತ್ತ 70-80 ಲಕ್ಷಕ್ಕೆ ಮೀರಿ ಹೋಗುತ್ತದೆ. ಜ್ಯುಡಿಷಿಯಲ್ ಸ್ಟಾಂಪ್ ಪೇಪರ್ಸ್‌ಗೆ ಸಂಬಂಧಿಸಿದ ಹಾಗೆ ತನಿಖೆ ನಡೆಯುತ್ತಿದೆ. ಆದರೆ ತನಿಖೆ ಇನ್ನು ಸಂಪೂರ್ಣ ಆಗಿಲ್ಲ. ಆದರೆ ಅಪರಾಧಿ ಯಾರು ಅಂತ ಸರಿಯಾಗಿ ಗೊತ್ತಾಗಿಲ್ಲ. ಈ ಒಂದು ನಕಲಿ ಛಾಪಕಾಗದಗಳನ್ನು ಕೊಟ್ಟವರು ಯಾರು ಎನ್ನುವುದಕ್ಕೆ ಯಾರ ಬಾಯಿಂದಲೂ ಮಾಹಿತಿ ಸಿಕ್ಕಿಲ್ಲಾ. ಯಾರೋ ಒಬ್ಬ ಕೇರಳಕ್ಕೆ ಸಂಬಂಧಪಟ್ಟವರು ಕೊಟ್ಟಿದ್ದಾರೆ ಎನ್ನತಕ್ಕ ಒಂದು ಮಾಹಿತಿಯನ್ನು ಮಾತ್ರ ವಕೀಲರ ಸಂಘದ ಕಾರ್ಯದರ್ಶಿಗಳಾದ ಮಾಚಯ್ಯನವರು ಕೊಟ್ಟಿದ್ದಾರೆ. ಆದರೆ ಈ ಹಿನ್ನಲೆಯಲ್ಲಿ ಬೇರೆ ಯಾವುದೇ ಸುಳಿವು ಸಿಕ್ಕಿಲ್ಲ. ಕೊಡಗಿನಲ್ಲಿ ಮಾತ್ರ ಈ ಜಾಲ ಇರದೇ, ಇದು ಹೊರ ರಾಜ್ಯಗಳಿಗೂ ಹರಡಿರಬಹುದು. ನಮ್ಮ ಪೋಲೀಸ್ ಇಲಾಖೆಯ ಹಿರಿಯ ಆಂಟಿ ಫ್ರಾಡ್ ಸ್ಕ್ವಾಡ್‌ನವರು ಇದರ ಬಗ್ಗೆ ಗಮನಹರಿಸಿದ್ದಾರೆ. ಅವರು ಇದರ ಬಗ್ಗೆ ನಾನಾ ಭಾಗಗಳಲ್ಲಿ ತನಿಖೆ ಮಾಡಿಸುತ್ತಿದ್ದಾರೆ. ತಾವು ಈ ಹಿನ್ನೆಲೆಯಲ್ಲಿ ಒಂದು ಪ್ರಶ್ನೆ ಕೇಳಿದೀರಿ. ನಕಲಿ ಛಾಪಾ ಕಾಗದಗಳನ್ನು ತೆಗೆದುಕೊಂಡು ರಿಜಿಸ್ಟರ್ ಮಾಡಿದವರ ಗತಿ ಏನು ಎನ್ನತಕ್ಕದ್ದು ಒಂದು ಸ್ವಾರಸ್ಯವಾದ ವಿಷಯ. ಇದು ಕಾನೂನಿನ ಒಂದು ಅಂಶ? ಏಕೆಂದರೆ ಯಾವುದೇ ಒಂದು ನೂರು ರೂಪಾಯಿಗೆ ಮೇಲ್ಪಟ್ಟ ಇಮ್ಯೂವಬಲ್ ಆಸ್ತಿಯನ್ನು ರಿಜಿಸ್ಟರ್ ಮಾಡಬೇಕಾದರೆ ಸ್ಟಾಂಪ್ ಡ್ಯೂಟಿಯನ್ನು ಕಟ್ಟಬೇಕು. Registration as such is illegal. All registrations are illegal now. Inspector General of Stamps ಅಲ್ಲಿ ಇಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸರ್ಕಾರದ ಮಟ್ಟದಲ್ಲಿ ನಾನು ಕೂಡ ಕಂದಾಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. Inspector General of stamps ಅವರ ಜೊತೆ ಚರ್ಚೆ ಮಾಡಿದ್ದೇನೆ. ಮತ್ತೆ ಇದೇ ಪರಿಸ್ಥಿತಿ ಜ್ಯುಡಿಷಿಯಲ್ ಸ್ಟಾ ಂಪ್ ಪೇಪರ್ಸ್‌ಗೂ ಆಗುತ್ತದೆ. ಇದೇ ತರಹ ಸಾವಿರ ಜ್ಯುಡಿಷಿಯಲ್ ಸ್ಟಾಂಪ್ ಪೇಪರ್‌ಗೂ ಆಗಿದೆ. ಕೆಲವು ಸಲ ಅವುಗಳನ್ನು ಡಿಕ್ರೀ ಮಾಡಿದ್ದಾರೆ ಮತ್ತೆ, ಕೆಲವು ಸಲ ಅವಾರ್ಡ್ ಮಾಡಿದ್ದಾರೆ. ಅದರ ಪರಿಸ್ಥಿತಿ ಏನು ಎನ್ನುವುದನ್ನು ನಾವು ಇವತ್ತು ನ್ಯಾಯಾಲಯದಲ್ಲಿ ಚರ್ಚೆ ಮಾಡಬೇಕು. ಬಹುಶಃ ಈ ವಿಚಾರವನ್ನು ಬೇರೆಯಾಗೇ ಚರ್ಚೆ ಮಾಡಬೇಕು. ಇವತ್ತು ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಅಮಾಯಕ ಜನ ಪಾಪದ ಜನ ಈ ಬಲೆಯಲ್ಲಿ ಬಿದ್ದುಬಿಟ್ಟಿದ್ದಾರೆ. ಇವರ ಬಗ್ಗೆ ನಾವು ಸದ್ಯದಲ್ಲೇ ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡುವವರಿದ್ದೇವೆ. ತಾವು ಸಿ.ಬಿ.ಐ ತನಿಖೆಗಾಗಿ ಕೇಳಿದೀರಿ. ಆದರೆ ಆಂಟಿ ಫ್ರಾಡ್ ಸ್ಕ್ವಾಡ್‌ನವರು ನಮ್ಮ ರಾಜ್ಯದ ನಾನಾ ಕಡೆಗಳಲ್ಲಿ ಈಗಾಗಲೇ ತಮ್ಮ ಜಾಲವನ್ನು ಬೀಸಿದ್ದಾರೆ. ಅವರು ಬಹುಶಃ ಈಗಾಗಲೇ ಕ್ರಮ ಕೈಗೊಂಡಿರಬಹುದು. ಆಂಟಿ ಫ್ರಾಡ್ ಸ್ಕ್ವಾಡ್‌ನವರೂ ತಮಿಳುನಾಡಿಗೂ ಹೋಗಬಹುದು. ಬೊಂಬಾಯಿಗೂ ಹೋಗಬಹುದು. ಈಗಾಗಲೇ ಅವರು ತಮಿಳುನಾಡಿಗೂ ಹೋಗಿದ್ದಾರೆ. ಬೊಂಬಾಯಿಗೂ ಹೋಗಿದ್ದಾರೆ. ಪೋಲೀಸಿನವರೂ ಈಗಾಗಲೇ ಇದರ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಆದರೆ ಮಾದಪ್ಪನವರೂ ಕೊಡಗಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ನಾಲ್ಕು ತಿಂಗಳಿಂದ ಇದರ ಬಗ್ಗೆ ಏನು ಕೆಲಸ ನಡೆಯುತ್ತಿಲ್ಲ, ಜಿಲ್ಲಾಉಸ್ತುವಾರಿ ಅಧಿಕಾರಿಗಳು ಇದರ ಬಗ್ಗೆ ನಿಷ್ಕ್ರಿಯರಾಗಿದ್ದಾರೆ ಎನ್ನತಕ್ಕ ಒಂದು ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ಆದರೆ ಇದನ್ನು ಬೆಳಕಿಗೆ ತರಬೇಕಾದರೆ ಅದಕ್ಕೆ ನಾನೇ ಮುಖ್ಯ ಕಾರಣಕರ್ತ ಎಂದು ಅವರಿಗೆ ಗೊತ್ತಿಲ್ಲ.

ಅಧ್ಯಕ್ಷರು : ಲೋಕಲ್ಲಾಗಿ ನಿಮ್ಮ ರೀಲೇಶನ್ ಚೆನ್ನಾಗಿ ಇದೆಯಲ್ಲ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಅವರ ನಮ್ಮ ಸಂಬಂಧ ಚೆನ್ನಾಗೇ ಇದೆ. ಆದರೆ ಪತ್ರಿಕೆ ಹೇಳಿಕೆ ಕೊಡಬೇಕಾದರೆ ಸ್ವಲ್ಪ ರಾಜಕೀಯ ಮಾಡಬೇಕಲ್ಲ.

ಅಧ್ಯಕ್ಷರು : ಬಸವರಾಜು ಮತ್ತು ಸದಾನಂದಗೌಡರಿಗೆ ಇದರ ಬಗ್ಗೆ ಸಂಬಂಧ ಇಲ್ಲ. ಮಾದಪ್ಪನವರೂ, ನಾಣಯ್ಯನವರೂ ಸಂಜೆ ಹೊತ್ತು ಮೀಟ್ ಮಾಡಿ ಇದರ ಬಗ್ಗೆ ಚರ್ಚೆ ಮಾಡಲಿ

(ಗೊಂದಲ)

ಶ್ರೀ ಡಿ. ಸುಬ್ರಾಯ ಮಾದಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಣಯ್ಯನವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು. ಕಾವೇರಿ ಇರತಕ್ಕಂಥ ಪುಣ್ಯಭೂಮಿಯಾದ ಕೊಡಗಿನಲ್ಲಿ ಭ್ರಷ್ಟಾಚಾರ ನಡೆದಾಗ ನಾನು ಮೊದಲನೇಯದಾಗಿ ನಾಣಯ್ಯನವರನ್ನು ಸಂಪರ್ಕ ಮಾಡಿದ್ದೆ, ಇದರ ಬಗ್ಗೆ ನಾನು ಅವರಿಗೆ ಹೇಳಿದ್ದೆ. ಅವರು ಇದರ ಬಗ್ಗೆ ಪೋಲಿಸ್ ಮುಖ್ಯಾಧಿಕಾರಿಗಳಿಂದ ತಕ್ಕ ವ್ಯವಸ್ಥೆ ಮಾಡಿಸುತ್ತೇವೆಂದು ಹೇಳಿದ್ದರು. ಆದರೆ ಅದು ಏನು ಆಗದೆ ಮೂರು ತಿಂಗಳ ನಂತರ ಅರ್ಜಿ ಸಮಿತಿ ಕೊಡಗಿಗೆ ಬಂದಾಗ, ಪುನಃ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಡಲಾಯಿತು. ನಾವು ಇಷ್ಟು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಆದರೂ ಇವತ್ತು ಅಪರಾಧಿಗಳು ರಾಜರೋಷವಾಗಿ ತಲೆಎತ್ತಿಕೊಂಡು ತಿರುಗುತ್ತಿದ್ದಾರೆ. ಯಾವ ಬಾಲಕೃಷ್ಣನ್ ಕೇರಳದಲ್ಲಿ ಇದ್ದಾನೆ, ಅವನನ್ನು ಪತ್ತೆ ಹಚ್ಚಿಲ್ಲ. ಮಾನ್ಯ ನಾಣಯ್ಯನವರು ಇದಕ್ಕೆ ಸಿಒಡಿ ಅವಶ್ಯಕತೆ ಇಲ್ಲ, ಸಿಬಿಐ ಅವಶ್ಯಕತೆ ಇಲ್ಲ ಎಂದು ಪತ್ರಿಕೆ ಹೇಳಿಕೆ ಕೊಟ್ಟಿದ್ದಾರೆ. ತಾವು ಗಮನ ಸೆಳೆಯುವ ಸೂಚನೆ ತಂದಾಗ, ಸಿಒಡಿಗೆ ಹಾಕಿದ್ದೀರಿ. ನಮ್ಮ ಬೇಡಿಕೆ ಇಷ್ಟೇ ನಮ್ಮ ಕೊಡಗು ಯಾವ ಒಂದು ಕೀರ್ತಿಯ ಜಿಲ್ಲೆ ಆಗಿತ್ತು. ಆ ಜಿಲ್ಲೆಯಲ್ಲಿ ಭ್ರಷ್ಟಾಚಾರಿಗಳು ತಾಂಡವವಾಡುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ನಮ್ಮ ಕೊಡಗು ಜಿಲ್ಲೆ ಸಿಕ್ಕಿಹಾಕಿಕೊಂಡಿದೆ. ನಾಣಯ್ಯನವರು ಹೇಳಿದರು ಇದು 1995ರಲ್ಲಿ ಸುಳಿವು ಸಿಕ್ಕಿತು ಎಂದು, ಆದರೆ 1993ರಲ್ಲಿ ತಮಿಳುನಾಡಿನಲ್ಲಿ ಇದರ ಬಗ್ಗೆ ಸುಳಿವು ಸಿಕ್ಕಿದಕ್ಕೆ ಮಾಹಿತಿ ಇದೆ. ಛಾಪಾಕಾಗದ ಪತ್ರಗಳ ಬಗ್ಗೆ ಸಿಬಿಐ ತನಿಖೆ ಆಗಲೇಬೇಕು. ಏಕೆಂದರೆ ಇದು ಇಡೀ ರಾಷ್ಟ್ರದಲ್ಲಿ ಇದೆ. ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲ. ಇದರಿಂದ ಮುಗ್ಧ ಜನ ಶೋಷಣೆಗೆ ಒಳಗಾಗುತ್ತಿದ್ದಾರೆ. ಆದುದರಿಂದ ಇದನ್ನು ಸಿಬಿಐಗೆ ಹಾಕಬೇಕೆಂದು ನಾಣಯ್ಯನವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಎಲ್ಲಾ ಪ್ರಕರಣಕ್ಕೆ ಅಲ್ಲಿ ನಡೆಯುತ್ತಿರುವ ವಾತಾವರಣ ಹಾಗೂ ಮಾತುಗಳು ಕಾರಣವಾಗುತ್ತವೆ. ಮಾಚಯ್ಯನವರು ಮನೆಯಲ್ಲಿ ಪೇಪರ್ ಸಂಗ್ರಹಣೆ ಆಗುತ್ತಿದುದ್ದು ಮತ್ತೊಂದು ಎಲ್ಲಾ ಗಮನಕ್ಕೆ ಬಂದಿದೆ. ಅಲ್ಲದೆ, ಊರಿನವರೆಲ್ಲಾ ಅವರ ಮನೆಯಲ್ಲಿ ಒಂದು ಹುಡುಗಿ ಇದ್ದು, ಅವಳ ನಿಗೂಢ ಸಾವು ಆಗಿದ್ದರ ಬಗ್ಗೆ ಮಾತನಾಡುತ್ತಿದ್ದಾರೆ. ತದನಂತರ ಹೂತಿದ್ದ ಹೆಣವನ್ನು ಮತ್ತೆ ಹೊರತೆಗೆಸಿ ಪರೀಕ್ಷೆ ಮಾಡಿದ್ದು ನನ್ನ ಗಮನಕ್ಕೆ ಬಂದಿದೆ. ಈ ಪ್ರಕರಣಕ್ಕೆ ಬೇಕಾದಂಥ ಸಾಕ್ಷಿಗಳನ್ನು ಮುಚ್ಚಿ ಹಾಕುವ ಪ್ರಯತ್ನ ಕೊಡಗು ಮತ್ತು ಸುಳ್ಯಾ ತಾಲ್ಲೂಕಿನಲ್ಲಿ ನಡೆಯುತ್ತಿದೆ. ಅದಕ್ಕಾಗಿ ಇದನ್ನು ಸಿಒಡಿ ಗಿಂತ ಸಿಬಿಐಗೆ ಒಪ್ಪಿಸಬೇಕೆಂದು ಒತ್ತಾಯ ಮಾಡುತ್ತಿರುವುದು.

MR. SPEAKER : Reply is convincing. ಅವರಿಗೆ ಮಾಡಲಿಕ್ಕೆ ಆಗಲಿಲ್ಲ ಎಂದರೆ ನಂತರ ಸಿ.ಬಿ.ಐ.ಗೆ ಕೊಡೋಣ.

ಶ್ರೀ ಎಂ. ಸಿ. ನಾಣಯ್ಯ : ನಕಲಿ ಕಾಗದಪತ್ರಗಳಿಗೂ ಆ ಹುಡುಗಿಯ ನಿಗೂಡ ಸಾವಿಗೂ ಯಾವುದೇ ಸಂಬಂಧ ಇಲ್ಲ. ಅದೇ ಬೇರೆ ಇದೇ ಬೇರೆ. ಅವರ ಮನೆಯಲ್ಲಿ ನಡೆದದ್ದು, ನಿಜ. ಎರಡನೆಯದಾಗಿ ನಾಣಯ್ಯನವರು ಸಿಓಡಿ ತನಿಖೆ ಬೇಡ ಎಂದು ಹೇಳಿದರು ಎನ್ನುವ ಮಾತು ಇದೆ. ನಮ್ಮಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಸ್ಥಳೀಯವಾಗಿ ಕೆಲಸ ಮಾಡತಕ್ಕವರು. ಇದನ್ನು ಬೇರೆ ಕಡೆ ಕೊಟ್ಟರೆ ಈ ಸ್ಥಳೀಯವಾಗಿರತಕ್ಕ ವಿಷಯ ಹಾಗೆ ಇರುವುದಿಲ್ಲ. ಆದ್ದರಿಂದ ಇದು ಬೆಳಕಿಗೆ ಬರುವುದಿಲ್ಲವೆಂದು ನಮ್ಮಪೋಲಿಸ್‌ನವರೂ ಕ್ರಮವನ್ನು ಕೈಗೊಂಡರು. ಮಾದಪ್ಪನವರೂ ಶಿವಕುಮಾರ್ ಬಗ್ಗೆ ಹೇಳಿದರು, ಅವರು ನಮ್ಮ ಪಕ್ಷದ ಹಿರಿಯ ಕಾರ್ಯಕರ್ತರು ಅದು ಅವರಿಗೂ ಗೊತ್ತಿದೆ.

ಶ್ರೀ ಬಸವರಾಜ್ ಹೆಚ್.ಡಿ : ಒಂದು ವಿಷಯವನ್ನು ಸದನದಲ್ಲಿ ಹೇಳಿದ್ದಾರೆ. ಶಿವಕುಮಾರ್ ನಮ್ಮ ಪಕ್ಷದವರು ಎಂದರೆ, ಅವರಿಗೆ ರಕ್ಷಣೆ ಕೊಡಬೇಕಾಗಿಲ್ಲ. ಯಾರು ಸಮಾಜಕ್ಕೆ ದ್ರೋಹವನ್ನು ಬಗೆಯುತ್ತಾರೆ, ಸಮಾಜಘಾತಕರು ಅವರು ನಮ್ಮ ಸ್ನೇಹಿತರಾಗಲೀ ಬಂಧುಗಳಾಗಲೀ ಅಂಥವರನ್ನು ಬಹಿರಂಗಪಡಿಸಬೇಕು ಅಂಥವರಿಗೆ ಶಿಕ್ಷೆ ಆಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದರ ಬಗ್ಗೆ ನಾಣಯ್ಯನವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರಿಗೆ ರಕ್ಷಣೆ ಕೊಡುವುದು ಬೇಡ, ಇದನ್ನು ಸಿಬಿಐ ಗೆ ಕೊಡಿ ಎಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಸಿಬಿಐ ನವರಿಗೆ ಇನ್ನು ಬೇರೆ ವಿಚಾರಗಳು ಇದ್ದಾವೆ. ಅವರೇ ಯಾವುದರಲ್ಲೋ ಗುದ್ದಾಡುತ್ತಿದ್ದಾರೆ. ಅವರಿಗೆ ನಾವೂ ಶ್ರಮ ಕೊಡುವುದು ಬೇಡ. ಅವರಿಗೆ ಇನ್ನು ನಾವು ಏನೇನು ಕೊಡುವವರಿದ್ದೇವೋ ಏನೋ ?

ಶ್ರೀ ಡಿ. ಸುಬ್ರಾಯ ಮಾದಪ್ಪ : ಇವತ್ತು ಸಿಬಿಐ ಅಂತರ್‌ರಾಜ್ಯ ವ್ಯಾಪ್ತಿಯಲ್ಲಿ ಕೆಲಸ ಮಾಡಬಹುದು. ನಾಣಯ್ಯನವರು ಉಪಾಧ್ಯಕ್ಷರಾಗಿರುವ ಶಿವಕುಮಾರ್‌ರವರು ನಮ್ಮ ಪಕ್ಷದವರು ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ನಾನು ಕೂಡ ಆ ಕ್ಷೇತ್ರದ ಒಬ್ಬ ಪ್ರತಿನಿಧಿ. ಆದುದರಿಂದ ಆ ಕ್ಷೇತ್ರದಲ್ಲಿ ಆಗಿರುವ ಹಣದ ಚಲಾವಣೆ 10 ಲಕ್ಷದ ವ್ಯವಹಾರದ ಬಗ್ಗೆ ನಾನು ಆ ಕ್ಷೇತ್ರದ ಶಾಸಕನಾಗಿರುವುದರಿಂದ ಅದು ನನ್ನ ಮೇಲೂ ಆಪಾದನೆ ಬರಬಹುದು. ಮಾನ್ಯ ನಾಣಯ್ಯನವರು ಆ ಸೊಸೈಟಿಯ ಸದಸ್ಯರಾಗಿರುವುದರಿಂದ, ನನಗೆ ಅವರ ಮೇಲೆ ಸಂಶಯ ಬರುತ್ತಿದೆ ಯಾರ ಯಾರ ಚಿತ್ರ ಬೆಳಕಿಗೆ ಬರಬಹುದೆಂದು ಅವರು ಹೆದರಬಹುದು, ಹಾಗಾಗಿ ಇದು ಸಿಬಿಐ ತನಿಖೆ ಆಗಲೇಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾದಪ್ಪನವರೇ ನೀವು ಅಲ್ಲಿ ವಕೀಲರಾಗಿಲ್ಲ. ಅಲ್ಲಿ 120 ಜನ ವಕೀಲರು ಅದರ ಸದಸ್ಯರಾಗಿದ್ದಾರೆ. ಇದರಲ್ಲಿ ಇಲ್ಲಿಯವರೆಗೆ ಏನು ನಡೆದಿದೆ ಎನ್ನುವುದನ್ನು ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿಗಳಾದ ಭಾಸ್ಕರ್‌ರಾವ್‌ರವರು ಬಹಳ ಅಚ್ಚುಕಟ್ಟಾಗಿ ಮಾಡಿ ಈ ಒಂದು ಹಗರಣವನ್ನು ಬೆಳಕಿಗೆ ತಂದಿದ್ದಾರೆ.

6.10 ಪಿ.ಎಂ

ಇದು ರಾಜ್ಯದ ಇತರ ಜಿಲ್ಲೆಗಳಲ್ಲಿ ಮತ್ತು ಇತರ ಭಾಗಗಳಲ್ಲಿ ನಡೆಯುತ್ತಿರುವ ಬಗ್ಗೆ ಮತ್ತು ಅದರ ಮೂಲ ಯಾವುದಿದೆ ಎಂಬುದನ್ನು ಕಂಡು ಹಿಡಿಯುವ ಉದ್ದೇಶದಿಂದಲೇ ಇದನ್ನು ಸಿ.ಓ.ಡಿ.ಗೆ ವಹಿಸಲಾಗಿದೆ. ಸಿ.ಓ.ಡಿ. ವರದಿ ಬಂದಾದ ಮೇಲೆ ಸಿ.ಬಿ.ಐ.ಗೆ ವಹಿಸುವ ಬಗ್ಗೆ ಯೋಚನೆ ಮಾಡೋಣ.

ಅಧ್ಯಕ್ಷರು : ಮಾನ್ಯ ಮಾದಪ್ಪನವರೇ, ಇನ್ನು ಇದರ ಮೇಲೆ ಮಾತನಾಡುವುದು ಬೇಡ. ದಯಮಾಡಿ ಸಹಕರಿಸಿ.

ಶ್ರೀ ಡಿ.ಎಸ್.ಮಾದಪ್ಪ : ಮಾನ್ಯ ಅಧ್ಯಕ್ಷರೇ, ಅಲ್ಲಿರುವ ಎಲ್ಲಾ ವಕೀಲರುಗಳೂ ಸಂಘದ ಸದಸ್ಯರಲ್ಲ. ಕೇವಲ 43 ಜನ ವಕೀಲರು ಮಾತ್ರ ಸೊಸೈಟಿ ಸದಸ್ಯರಾಗಿದ್ದಾರೆ. ಅದರಲ್ಲಿ 11 ಜನ ಡೈರೆಕ್ಟರ್ಸ್ ಇದ್ದಾರೆ. ಮಾನ್ಯ ನಾಣಯ್ಯನವರು ಹೇಳಿದಂತೆ 120 ಜನರೂ ಅದರ ಸದಸ್ಯರಲ್ಲ. ಇವತ್ತು ಅಲ್ಲಿಯ ವಕೀಲರ ಅಸೋಸಿಯೇಷನ್ ಆರೋಪಿಗಳನ್ನು ಡಿಬಾರ್ ಮಾಡಬೇಕೆಂದು ನಿರ್ಣಯ ಮಾಡಿದೆ. ಆರೋಪಿಗಳಾಗಿರುವ ಸಂಘದ ಪದಾಧಿಕಾರಿಗಳು ಯಾರಿದ್ದಾರೆ, ಅವರನ್ನು ಡಿಬಾರ್ ಮಾಡಲು ಸಂಘ ನಿರ್ಣಯ ತೆಗೆದುಕೊಂಡಿದೆ. ಎಲ್ಲಾ ವಕೀಲರೂ ಸಂಘದ ಸದಸ್ಯರಾಗಿಲ್ಲ.

ಅಧ್ಯಕ್ಷರು : ಅದು ಹಾಗಲ್ಲ, ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಎಲ್ಲೆಲ್ಲಿ ಕೋರ್ಟ್ ಇರುತ್ತದೆ, ಅಲ್ಲೆಲ್ಲಾ ಅಡ್ವೊಕೇಟ್ಸ್ ಅಸೋಸಿಯೇಷನ್‌ಗಳು ಇರುತ್ತವೆ. ಸಾಮಾನ್ಯವಾಗಿ ಅಲ್ಲಿ ಎಲ್ಲರೂ ಸೇರಿಕೊಂಡು ಒಂದು ಲೀಗಲ್ ಪ್ರಾಕ್ಟೀಷನರ್ಸ್ ಕೋ-ಆಪರೇಟಿವ್ ಸೊಸೈಟಿ ಅಂತ ಮಾಡಿಕೊಂಡಿರುತ್ತಾರೆ. ಎಲ್ಲಾ ಅಡ್ವೊಕೇಟ್ಸ್‌ಗಳೂ ಅಲ್ಲಿ ಎನ್‌ರೋಲ್‌ಮೆಂಟ್‌ಗೆ ಹೋದಾಗ ತಕ್ಷಣ ಆಟೋಮೆಟಿಕ್ಕಾಗಿ ಒಂದು ಫಾರಂ ತುಂಬಿಸಿಕೊಂಡು ಅವರನ್ನೆಲ್ಲಾ ಮೆಂಬರ್ ಮಾಡಿಕೊಳ್ಳುತ್ತಾರೆ. ಬೆಂಗಳೂರಿನಲ್ಲೂ ಕೂಡ ಅಂತಹ ಒಂದು ಸಂಘ ಇದೆ. ಎಲ್ಲರೂ ಸೊಸೈಟಿ ಮೆಂಬರ್ಸ್ ಆಗಿರಬೇಕು. ಇದರ ಬಗ್ಗೆ ನಿಮಗೇನೂ ಗೊತ್ತಾಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳು ಸಮುದ್ರಕ್ಕೆ ಸೇರುವುದರಿಂದ ಮೀನುಗಾರರಿಗೆ ತೊಂದರೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳು ಸಮುದ್ರಕ್ಕೆ ಸೇರುವುದರಿಂದ ಮೀನುಗಾರರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) : ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಬೃಹತ್ ಕೈಗಾರಿಕೆಗಳು ಸಮುದ್ರಕ್ಕೆ